



ಕವಿಗಳು ಹುದುಗಿರುವ ವ್ಯಕ್ತಿಗೆ ತಮ್ಮ ಗಜ಼ಲ್ ಹೇಳತೊಡಗಿದರು. ಗಜ಼ಲ್‌ಗಳ ವಿನಿಮಯವೇ ಆಗತೊಡಗಿತು.

ಈಗ ವಿಷಯ ಸ್ಪಷ್ಟವಾಯಿತು. ಹುದುಗಿರುವ ವ್ಯಕ್ತಿ ಒಬ್ಬ ಕವಿ. ಸೆಕ್ರೆಟರಿಯೇಟ್‌ನ ಸಬ್‌ಕಮಿಟಿಯಲ್ಲಿ ತಕ್ಷಣ ತೀರ್ಮಾನವಾಯಿತು. ಮರದ ಕೆಳಗೆ ಸಿಲುಕಿರುವ ವ್ಯಕ್ತಿ ಒಬ್ಬ ಕವಿಯಾಗಿರುವುದರಿಂದ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಕೃಷಿ ವಿಭಾಗ ಅಥವಾ ಹಾರ್ಟಿಕಲ್ಚರ್ ವಿಭಾಗಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಸಂಸ್ಕೃತಿ ವಿಭಾಗಕ್ಕೆ ವಹಿಸಬೇಕು. ಅವರೇ ಸೂಕ್ತ ನಿರ್ಧಾರ ತೆಗೆದುಕೊಂಡು ಮರದ ಕೆಳಗೆ ಹುದುಗಿರುವ ಕವಿಗೆ ಕೂಡಲೇ ನ್ಯಾಯ ಒದಗಿಸಿ ಆತನಿಗೆ ಮುಕ್ತಿ ನೀಡಬೇಕು.

ಈ ನಿರ್ಣಯವನ್ನು ಹೊತ್ತ ಫೈಲ್ ಬೇರೆ ಬೇರೆ ವಿಭಾಗಗಳನ್ನು ದಾಟಿ ಕೊನೆಗೆ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯ ಬಳಿಗೆ ತಲುಪಿತು. ಕೂಡಲೇ ಆ ಕಾರ್ಯದರ್ಶಿ ತನ್ನ ಕಾರಿನಲ್ಲಿ ಸೆಕ್ರೆಟರಿಯೇಟ್ ತಲುಪಿ ಅಲ್ಲಿಂದ ತಕ್ಷಣ ಘಟನಾ ಸ್ಥಳಕ್ಕೆ ಬಂದು ಹುದುಗಿರುವ ವ್ಯಕ್ತಿಯ ಸಂದರ್ಶನಕ್ಕೆ ಮುಂದಾದ...

‘ತಮ್ಮ ಹೆಸರು..? ನೀವು ಕವಿಗಳೇನು..?’

‘ಹೌದು...’

‘ಯಾವ ವಿಭಾಗದಲ್ಲಿ ಪರಿಣತಿ ಇದೆ?’

‘ಶಾಯರಿ, ಗಜ಼ಲ್...’

‘ಹಾಂ..! ಶಾಯರಿ. ನಿಮ್ಮ ‘ಪ್ರೀತಿಯ ಬಗೆ...’ ಶಾಯರಿ ಮೊನ್ನೆ ತಾನೇ ಪತ್ರಿಕೆಯಲ್ಲಿ ಪ್ರಕಟವಾಗಿದೆ.’ ಹುದುಗಿರುವ ವ್ಯಕ್ತಿ ಹೌದೆನ್ನುವಂತೆ ತಲೆ ಅಲ್ಲಾಡಿಸಿದ.

‘ತಾವು ಅಕಾಡೆಮಿಯ ಸದಸ್ಯರಾಗಿದ್ದೀರೇನು?’ ಕಾರ್ಯದರ್ಶಿ ಕೇಳಿದ.

‘ಇಲ್ಲ...’

‘ಛೇ..! ಎಂತಹ ವಿಪರ್ಯಾಸ...! ಇಷ್ಟು ದೊಡ್ಡ ಕವಿ ನಮ್ಮ ಅಕಾಡೆಮಿಯ ಸದಸ್ಯರಾಗಿಲ್ಲವೆಂದರೆ ಏನರ್ಥ? ಓಹ್..! ಎಂತಹ ಪ್ರಮಾದವಾಗಿದೆ ನಮ್ಮಿಂದ? ಇಂಥ ದೊಡ್ಡ ಕವಿ ಅನಾಮಿಕನಾಗಿ ಕತ್ತಲೆಯಲ್ಲಿಯೇ ಸಿಲುಕಿದ್ದಾರೆ ಎಂದರೆ ಏನರ್ಥ?’

‘ಅಯ್ಯೋ... ನಾನು ಅನಾಮಿಕನಾಗಿ ಕತ್ತಲೆಯಲ್ಲಿ ಸಿಲುಕಿಲ್ಲ. ನಾನೀಗ ಮರದ ಕೆಳಗೆ ಸಿಲುಕಿದ್ದೇನೆ. ದಯಮಾಡಿ ನನ್ನನ್ನು ಇಲ್ಲಿಂದ ಪಾರು ಮಾಡಿ.’ ಆ ವ್ಯಕ್ತಿ ಅಂಗಲಾಚಿದ.

‘ಸರಿ... ಸರಿ... ಈಗಲೇ ವ್ಯವಸ್ಥೆ ಮಾಡುತ್ತೇವೆ...’ ಎನ್ನುತ್ತ ಕಾರ್ಯದರ್ಶಿ ತಕ್ಷಣ ತನ್ನ ಇಲಾಖೆಗೆ ವರದಿ ಸಲ್ಲಿಸಿದ.

ಅದರ ಮಾರನೆಯ ದಿನವೇ ಕಾರ್ಯದರ್ಶಿ ಓಡೋಡಿ ಬಂದು ನೇರಳೆ ಮರದ ಕೆಳಗಿನ ಕವಿಗೆ ಹೇಳಿದ. ‘ತಮಗೆ ಶುಭಾಶ್ಚರ್ಯಗಳು. ನಮ್ಮ ಸಾಹಿತ್ಯ ಅಕಾಡೆಮಿಯು ತಮ್ಮನ್ನು ಸದಸ್ಯರನ್ನಾಗಿ ನೇಮಿಸಿದೆ. ತಗೊಳ್ಳಿ, ಈ ಆರ್ಡರ್ ಕಾಪಿ, ಇದಕ್ಕಾಗಿ ನೀವು ಸಹಿ ಹಂಚಲೇಬೇಕು.’

‘ಸ್ವಾಮೀ... ಮೊದಲು ನನ್ನನ್ನು ಈ ಮರದ ಕೆಳಗಿನಿಂದ ಹೊರಗೆ ತೆಗೆಯಿರಿ. ಆಮೇಲೆ ಉಳಿದ ವಿಚಾರ.’ ಆ ವ್ಯಕ್ತಿ ನರಳುತ್ತಲೇ ಹೇಳಿದ.

‘ಇಲ್ಲ, ಆ ಕೆಲಸ ನನ್ನಿಂದ ಸಾಧ್ಯವಿಲ್ಲ. ಒಂದು ವೇಳೆ ತಾವು ಮರಣಿಸಿದರೆ ತಮ್ಮ ಪತ್ನಿಗೆ ನಾನು ಪಿಂಚಣಿ ಕೊಡಿಸಬಹುದಷ್ಟೆ. ಇದಕ್ಕೂ ತಮ್ಮ ಅರ್ಜಿ ಬೇಕಾಗುತ್ತದೆ ಈಗ...’

‘ಆದರೆ ನಾನಿನ್ನೂ ಬದುಕಿದ್ದೇನೆ. ದಯಮಾಡಿ ಹೊರಗೆ ತೆಗೆಯಿರಿ...’

ಅಕಾಡೆಮಿಯ ಕಾರ್ಯದರ್ಶಿ ವಿನೀತನಾಗಿ ಹೇಳಿದ. ‘ನಮ್ಮ ವಿಭಾಗ ಕೇವಲ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಾತ್ರ ಆದ್ಯತೆ ನೀಡುತ್ತದೆ. ಹಾಗಾಗಿ ನಾವು ಅರಣ್ಯ ವಿಭಾಗಕ್ಕೆ ಕೂಡಲೆ ತುರ್ತು ಪತ್ರ ಬರೆಯುತ್ತೇವೆ...’

ಸಂಜೆ ಮಾಲಿ ಕಳ್ಳ ಹೆಜ್ಜೆ ಇಡುತ್ತ ಬಂದು ಈ ವ್ಯಕ್ತಿಗೆ ಹೇಳಿದ. ‘ನಾಳೆಯೇ ಅರಣ್ಯ ವಿಭಾಗದ ಸಿಬ್ಬಂದಿ ಬಂದು ಈ ಮರವನ್ನು ಕಡಿದು ಹಾಕುತ್ತಾರೆ. ಆಗ ಖಂಡಿತ ನಿಮ್ಮ ಪ್ರಾಣ ಉಳಿಯುತ್ತದೆ...’

ಮರದ ಕೆಳಗೆ ಸಿಲುಕಿರುವ ವ್ಯಕ್ತಿಯ ಆರೋಗ್ಯ ಹದಗೆಡುತ್ತಿದ್ದರೂ ಮಾಲಿ ಮಾತ್ರ ಸ್ವಲ್ಪ ಸಮಾಧಾನದಲ್ಲಿದ್ದ. ಹೇಗಾದರೂ ಸರಿ, ನಾಳೆ ಬೆಳಗಿನ ತನಕ ಆತನ ಪ್ರಾಣ ಉಳಿದಿದ್ದರೆ ಸಾಕು, ಎಲ್ಲ ಸರಿ ಹೋಗುತ್ತದೆ ಎಂಬುದು ಮಾಲಿಯ ಅಭಿಪ್ರಾಯವಾಗಿತ್ತು.

ಮಾರನೇ ದಿನವೇ ಅರಣ್ಯ ವಿಭಾಗದ ನೌಕರರು ಕೊಡಲಿ, ಗರಗಸ ತೆಗೆದುಕೊಂಡು ಬಂದೇ ಬಿಟ್ಟರು. ಇನ್ನೇನು ಮರವನ್ನು ಕತ್ತರಿಸಿಯೇ ಬಿಡುತ್ತಾರೆ ಎನ್ನುವಷ್ಟರಲ್ಲಿ ವಿದೇಶ ಮಂತ್ರಾಲಯದಿಂದ ಆದೇಶ ಬಂತು. ‘ಮರವನ್ನು ಕಡಿಯಬಾರದು. ಏಕೆಂದರೆ ಹತ್ತು ವರ್ಷಗಳ ಮೊದಲು ಪಿಟೋನಿಯಾ ದೇಶದ ಪ್ರಧಾನ ಮಂತ್ರಿಯವರು ಸೆಕ್ರೆಟರಿಯೇಟ್‌ನ ಲಾನ್‌ನಲ್ಲಿ ಈ ನೇರಳೆಮರವನ್ನು ನೆಟ್ಟಿದ್ದರು. ಈಗ ಆ ಮರವನ್ನು ಕಡಿದುಬಿಟ್ಟರೆ ಪಿಟೋನಿಯಾ ಹಾಗೂ ನಮ್ಮ ದೇಶದ ನಡುವಿನ ಸಂಬಂಧ ಹದಗೆಡಬಹುದೆಂಬ ಆತಂಕವಿದೆ...’

‘ಇದು ಒಬ್ಬ ವ್ಯಕ್ತಿಯ ಸಾವುಬದುಕಿನ ಪ್ರಶ್ನೆಯಾಗಿದೆ...’ ಒಬ್ಬ ಕ್ಲಾರ್ಕ್ ತಕ್ಷಣ ಕೋಪದಿಂದ ಅಬ್ಬರಿಸಿದ.

‘ಆದ್ರೆ ಇದು ಎರಡೂ ದೇಶಗಳ ಸಂಬಂಧದ ಪ್ರಶ್ನೆಯಾಗಿದೆ...’ ಮತ್ತೊಬ್ಬ ಕ್ಲಾರ್ಕ್ ಸಮಜಾಯಿಷಿ ನೀಡಿದ.

‘ಜೊತೆಗೆ ಪಿಟೋನಿಯಾ ಸರ್ಕಾರ ನಮಗೆ ಅತ್ಯಧಿಕ ಸಹಾಯ ಮಾಡುತ್ತಿದೆ. ಇಂತಿರುವಾಗ ಎರಡೂ ದೇಶಗಳ ಮೈತ್ರಿ ಸಂಬಂಧಕ್ಕಾಗಿ ಒಬ್ಬ ಮಾಮೂಲಿ ವ್ಯಕ್ತಿಯು ತನ್ನ ಜೀವವನ್ನು ಬಲಿದಾನ ಗೈಯ್ಯುವುದರಲ್ಲಿ ತಪ್ಪೇನಿದೆ...’ ಎಂದು ಮತ್ತೊಬ್ಬ ಹೇಳಿದ.

‘ಅಂದರೆ ಈ ಮರದ ಕೆಳಗೆ ಹುದುಗಿರುವ ಕವಿ ಸಾಯುವುದೇ ಲೇಸು ಎಂದು ಅರ್ಥವೇ?’

‘ಖಂಡಿತವಾಗಿಯೂ...’

ಅಂಡರ್ ಸೆಕ್ರೆಟರಿ ಸೂಪರಿನ್‌ಟೆಂಡ್‌ಡೆಂಟ್‌ಗೆ ತಿಳಿಸಿದ. ‘ಇಂದು ಬೆಳಿಗ್ಗೆ ಪ್ರಧಾನ ಮಂತ್ರಿಯವರು ವಿದೇಶ ಪ್ರವಾಸದಿಂದ ಸ್ವದೇಶಕ್ಕೆ ಬಂದಿಳಿದಿದ್ದಾರೆ. ವಿದೇಶ ಮಂತ್ರಾಲಯದ ವತಿಯಿಂದ ಸದರಿ ಮರವನ್ನು ಕಡಿಯುವುದಕ್ಕೆ ಸಂಬಂಧಿಸಿದ ಫೈಲನ್ನು ಪ್ರಧಾನಮಂತ್ರಿಯವರ ಸಮ್ಮುಖ ಪ್ರಸ್ತುತ ಪಡಿಸಲಾಗುವುದು. ಅವರು ನೀಡುವ ತೀರ್ಮಾನವೇ ಸರ್ವಮಾನ್ಯವಾಗುವುದು.’

ಅಂದು ಸಂಜೆ ನಾಲ್ಕು ಗಂಟೆಗೆ ಸೂಪರಿಟೆಂಡೆಂಟ್ ಸ್ವತಃ ಸದರಿ ಕವಿಯ ಫೈಲನ್ನು ತೆಗೆದು ಆತನ ಸಮ್ಮುಖ ಪ್ರಸ್ತುತ ಪಡಿಸುತ್ತ ಅತ್ಯಂತ ಖುಷಿಯಿಂದ ಉದ್ಘೋಷಿಸಿದ... ‘ಸನ್ಮಾನ್ಯ ಪ್ರಧಾನಮಂತ್ರಿಯವರು ಸದರಿ ಮರವನ್ನು ಕಡಿಯಲು ಆದೇಶ ನೀಡಿದ್ದಾರೆ. ಹಾಗೇನೇ ಈ ಘಟನೆಗೆ ಸಂಬಂಧಿಸಿದ ಹಾಗೂ ಅಂತರರಾಷ್ಟ್ರೀಯ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡಿದ್ದಾರೆ. ನಾಳೆಯೇ ಮರವನ್ನು ಕಡಿಯಲಾಗುತ್ತದೆ, ಜೊತೆಗೆ ನೀವು ಈ ಸಂಕಷ್ಟದಿಂದ ಮುಕ್ತಿ ಪಡೆಯುತ್ತೀರಿ...’

ಮರದ ಕೆಳಗೆ ಬಾಗಿ ಸೂಪರಿಟೆಂಡೆಂಟ್ ಇಮ್ಮಡಿ ಉತ್ಸಾಹದಿಂದ ಹೇಳಿದ... ‘ಅರೆ, ನನ್ನ ಮಾತು ಸರಿಯಾಗಿ ಕೇಳಿಸಿಕೊಳ್ಳಿ. ನಿಮ್ಮ ಫೈಲ್ ಬಗ್ಗೆ ಅಂತಿಮ ಇತ್ಯರ್ಥವಾಗಿದೆ...’ ಎನ್ನುತ್ತಾ ಕವಿಯ ಭುಜವನ್ನು ಹಿಡಿದು ಅಲ್ಲಾಡಿಸಿದ. ಆದರೆ ಕೈಗಳು ತಣ್ಣಗಾಗಿ ಹೋಗಿದ್ದವು. ಕಣ್ಣುಗುಡ್ಡೆಗಳು ತೇಲಿಕೊಂಡಿದ್ದವು. ಇರುವೆಗಳ ಉದ್ದನೆಯ ಸಾಲು ಬಾಯಿಯೊಳಗೆ ಹೋಗುತ್ತಿತ್ತು.

ಆತನ ಜೀವನದ ಫೈಲ್ ಕೊನೆಗೂ ಸಂಪೂರ್ಣವಾಗಿ ಇತ್ಯರ್ಥವಾಗಿ ಹೋಗಿತ್ತು. ■